ಕ್ರಾಸ್, 41ನೇ ವಾರ್ಡ್‌ನ ಹೆಗ್ಗೇರಿ ಭುವನೇಶ್ವರನಗರ, ಹೆಗ್ಗೇರಿ     ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.



ವಸ್ಥಾಪಕ
ಇದ್ದರು.

ಸಿಂಘಿ,
ರವಾಡದ
ಸಾಧನೆ.
ಮ್ಮನಗೌಡ್ರ
ಂಗಾವತಿ,
ನಿಧಿಗಳು
ವರ್ತಕರ
ಪ್ರತಿನಿಧಿ

# ...ಪ್ತಿ ಮೋಡದ ಬಿತ್ತನೆ ಬದಲು ಮರ ನೆಡಿ

■ **ವಿಕ ಸುದ್ದಿಲೋಕ** ಧಾರವಾಡ

ನಗರದ ಎಸ್‌ಡಿ ಎಂ ಎಂಜಿನಿಯರಿಂಗ್ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಅರಣ್ಯ ಸಂರಕ್ಷಣೆ ಹಾಗೂ ನೀರು ಉಳಿಸಿ ದಿನಾಚರಣೆಯ ಅಂಗವಾಗಿ ಶಿಕ್ಷಕೇತರ ಸಿಬ್ಬಂದಿಗೆ 3 ದಿನಗಳ ಕಾಲ ಹಮ್ಮಿಕೊಂಡಿರುವ ಕಾರ್ಯಾಗಾರವನ್ನು ಮಾನಸಿಕ ತಜ್ಞ ಡಾ.ಆನಂದ ಪಾಂಡುರಂಗಿ ಗುರುವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಡಾ.ಆನಂದ ಪಾಂಡುರಂಗಿ, ಮೋಡ ಬಿತ್ತನೆಗಿಂತ ಮರಗಳ ಬಿತ್ತನೆ ಲೇಸು. ಮರಗಳ ಸಂಖ್ಯೆ ಕಡಿಮೆ ಯಾಗಿರುವದರಿಂದ ಮಳೆಯ ಪ್ರಮಾಣವು ಕಡಿಮೆಯಾಗಿ ಬರ ಪರಿಸ್ಥಿತಿ ಎದುರಿಸಬೇಕಾಗಿದ್ದು, ಪ್ರತಿಯೊಬ್ಬರು ಕನಿಷ್ಠ ಹತ್ತು ಸಸಿಗಳನ್ನು ನೆಟ್ಟು ಪೋಷಿಸಬೇಕಾದ ಅವಶ್ಯಕತೆ ಇದೆ ಎಂದರು.

ಸಿಬ್ಬಂದಿ ವರ್ಗದವರು ಕರ್ತವ್ಯ ನಿರ್ವಹಿಸುವ ಸಮಯದಲ್ಲಿ ಮಾನಸಿಕ ಒತ್ತಡಕ್ಕೆ ಒಳಗಾಗದೆ ನಿಷ್ಠೆ ಪೂರ್ಣವಾಗಿ ಕಾರ್ಯವನ್ನು ನಿರ್ವಹಿಸಿದರೆ ಜೀವನದ ಯಶಸ್ಸು ಸಾಧ್ಯ. ಇಂತಹ ಮಾನಸಿಕ ಒತ್ತಡದಿಂದ ಹೊರಬರಲು ಕುಡಿತ, ಗುಟಕಾ - ಸಿಗರೇಟ ಸೇವನೆಯಂತಹ ಮಾರಕ ಚಟಕ್ಕೆ ಅಂಟಿಕೊಂಡರೆ ಅನಾರೋಗ್ಯಕ್ಕೆ ತುತ್ತಾಗುತ್ತಾರೆಯೇ ವಿನಃ ಮಾನಸಿಕ ಒತ್ತಡದಿಂದ ಹೊರ ಬರಲು ಸಾಧ್ಯವಿಲ್ಲ ಎಂದು ತಿಳಿಸಿದರು.



ಧಾರವಾಡ ಎಸ್‌ಡಿಎಂ. ಎಂಜನೀಯರಿಂಗ್ ಕಾಲೇಜಿನಲ್ಲಿ ಗುರುವಾರ ನಡೆದ ಕಾರ್ಯಾಗಾರವನ್ನು ಮಾನಸಿಕ ತಜ್ಞ ಡಾ.ಆನಂದ ಪಾಂಡುರಂಗಿ ಗುರುವಾರ ಉದ್ಘಾಟಿಸಿದರು.

ಪ್ರಾ.ಡಾ. ಎಸ್.ಬಿ. ವಣಕುದುರೆ ಮಾತನಾಡಿ, ಎಸ್‌ಡಿಎಂ ಕಾಲೇಜಿನಲ್ಲಿ ಟೆಕ್ವಿಪ್ 1.2. ಯೋಜನೆ ಅಡಿಯಲ್ಲಿ ಇಂತಹ ಕಾರ್ಯಾಗಾರಗಳನ್ನು ಏರ್ಪಡಿಸುತ್ತಾ ಬಂದಿದ್ದು, ಇದರ ಸದುಪಯೋಗವನ್ನು ಸಿಬ್ಬಂದಿ ವರ್ಗವು ಪಡೆದುಕೊಳ್ಳಬೇಕೆಂದು ಹೇಳಿದರು.

ಫಕ್ಕೀರಪ್ಪ ಪ್ರಾರ್ಥಿಸಿದರು. ಪಿ.ವಿ. ಗಂಗಾಧರ ರಾವ್ ಸ್ವಾಗತಿಸಿದರು. ಸುರೇಶ ಶೆಟ್ಟಿ ವಂದಿಸಿದರು. ಸೀಮಾ ಕೋಟ್ಕರ್ ನಿರೂಪಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ಪ್ರೋ. ಕಿನನಗೆ ಉಪನ್ಯಾಸ ನೀಡಿದರು. ಡಾ. ಮೃತ್ಯುಂಜಯ ಕಪ್ಪಾಳಿ, ಮೇಘಾ ಹುಕ್ಕೇರಿ, ಪ್ರತಿಭಾ ಸೋನೆಕರ, ವೀಣಾ ದೇಸಾಯಿ, ಸುಮನಾ ಕುಮಾರಿ, ಹೇಮಾ ಕುಕನೂರ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

# ...ೋಗಿ ಸಮಾಜ ಸಮುದಾಯ ಭವನ ಉದ್ಘಾಟನೆ

**...ಕ ಸುದ್ದಿಲೋಕ** ಹುಬ್ಬಳ್ಳಿ

...ಮಧೂರಕರ ಮೆಮೋರಿಯಲ್ ಟ್ರಸ್ಟ್
...ೂ ಹಿಂದುಳಿದ ವರ್ಗಗಳ ಕಲ್ಯಾಣ
...ೀಜನೆಯಡಿ ಗೋಕುಲದಲ್ಲಿ ನಿರ್ಮಿಸಿದ
ಶಿವಗುರು ಗೋರಕ್ಷನಾಥ ಜೋಗಿ
...ಾಜದ ಸಮುದಾಯ ಭವನವನ್ನು ಶಾಸಕ
...ಿಂದ ಬೆಲ್ಲದ ಉದ್ಘಾಟಿಸಿದರು.
...ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ
...ದ, ಬಡತನ ರೇಖೆಯಲ್ಲಿರುವ ಜೋಗಿ
...ಾಜ ಬಾಂಧವರು ಈ ಭವನವನ್ನು ಸದ್ಬಳಕೆ
...ಡಿಕೊಳ್ಳಬೇಕೆಂದು ಸಲಹೆ ಮಾಡಿದರು.

